



ಅರುಣ ಪಿ. ಭಟ್ಟ

## ವಾರಭವಿಷ್ಯ: 21.03.2024ರಿಂದ 27.03.2024ವರೆಗೆ




ಮಕ್ಕಳ ಬಗ್ಗೆ ನಿಮ್ಮ ಗಮನ ಹಾಗೂ ಅವರ ಪರಿಸರವನ್ನು ಉತ್ತಮವಾಗಿಟ್ಟುಕೊಳ್ಳುವ ಮನಸ್ಥಿತಿಯನ್ನು ರೂಪಿಸುವುದು ಒಳ್ಳೆಯದು. ಶ್ರಮದ ಕೆಲಸಗಳಿಂದ ಸಾರ್ಥಕತೆಯ ಭಾವನೆ ನಿಮ್ಮಲ್ಲಿ ಕಾಣಬಹುದು. ಉದ್ಯೋಗ ಸ್ಥಳದಲ್ಲಿ ನಿಮ್ಮ ಗೌರವ, ವರ್ಚಸ್ಸು ಹೆಚ್ಚುವ ಸಾಧ್ಯತೆ ಇದೆ. ಬಾಕಿ ಇರುವ ಹಲವು ಕೆಲಸಗಳನ್ನು ಪೂರ್ಣಗೊಳಿಸುತ್ತೀರಿ. ಶುಭದಿನ 25. ಲಕ್ಷ್ಮೀನಾರಾಯಣ ಹೃದಯ ಪಾರಾಯಣ ಮಾಡಿರಿ.

---




ನೀವು ಮಾಡುವ ಕೆಲಸದಲ್ಲಿ ಉತ್ತಮ ಫಲಿತಾಂಶ ಹಾಗೂ ಆದಾಯ ಸಿಗಲಿದೆ. ನೀವು ಒಬ್ಬರಿಗೆ ಒಳ್ಳೆಯದನ್ನು ಬಯಸಿದರೆ ಕೆಲವರು ಅಪಾರ್ಥ ಮತ್ತು ಅಪಹಾಸ್ಯದಿಂದ ವರ್ತಿಸಬಹುದಾಗಿದೆ. ನಿಮ್ಮ ಮೇಲಧಿಕಾರಿಗಳ ಇಲ್ಲವೆ ಮನೆಯ ಹಿರಿಯರ ಒಲುಮೆ ಗಳಿಸಿಕೊಳ್ಳುವಿರಿ. ನಿಮ್ಮ ನಡತೆಯು ಹೆಚ್ಚು ಪ್ರಶಂಸೆಗೆ ಒಳಪಡುವುದು. ಮಂಗಳಕಾರ್ಯದಲ್ಲಿ ಭಾಗಿಯಾಗುವಿರಿ. ಶುಭದಿನ 24. ಆದಿತ್ಯ ಹೃದಯ ಪಠಿಸಿರಿ.

---




ನಿಮ್ಮಲ್ಲಿನ ಜಡತ್ವ ಕರಗಿ ಹೋಗಲಿದೆ. ನಿಮ್ಮ ವಿನಯದ ಸ್ವಭಾವದಿಂದ ಹೆಚ್ಚಿನ ಹೆಸರು ಸಂಪಾದನೆ ಮಾಡಲಿದ್ದೀರಿ. ಸಂಗಾತಿಯ ಬಯಕೆಗಳಿಗೆ ನೀವು ಸಮ್ಮತಿಯ ವಾಗ್ದಾನ ನೀಡಲಿದ್ದೀರಿ. ಮಕ್ಕಳ ಕೆಲವು ವರ್ತನೆಗಳು ನಿಮ್ಮ ಮನದಲ್ಲಿ ಬೇಸರ ತರಿಸಲಿದೆ, ಆದಷ್ಟು ಅವರನ್ನು ಸರಿಪಡಿಸಲು ಯೋಜನೆ ರೂಪಿಸಬೇಕಾದ ಅನಿವಾರ್ಯತೆ ಕಂಡುಬರುತ್ತದೆ. ಶುಭದಿನ 26. ಸೌಂದರ್ಯ ಲಹರಿ ಪಠಿಸಿರಿ.

---




ಮಾಡುವ ಕೆಲಸದಲ್ಲಿ ಅನಗತ್ಯ ತೊಂದರೆ ಬರಬಹುದು. ಆದಷ್ಟು ಸಮಸ್ಯೆಗೆ ಪರಿಹಾರ ಹುಡುಕಿ. ಸಾಲ ವಸೂಲಾತಿಯಲ್ಲಿ ನಿಮ್ಮ ನಿರೀಕ್ಷೆ ಹುಸಿಯಾಗಲಿದೆ. ಬರುವಂತ ಆರ್ಥಿಕ ಮೂಲಗಳು ತಡೆಯಾಗುವ ಸಾಧ್ಯತೆ ಕಂಡುಬರುತ್ತದೆ. ನಿಮ್ಮ ಬುದ್ಧಿ ಬಲದಿಂದ ಪದೋನ್ನತಿ ಸಿಗುವುದು. ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಓದು ಮುಂದುವರಿಕೆಯ ಬಗ್ಗೆ ಚಿಂತನೆ ನಡೆಸುವಿರಿ. ಶುಭದಿನ 27. ಕಾಲಭೈರವನ ಆರಾಧನೆ ಮಾಡಿರಿ.

---




ವಿವೇಚನಾರಹಿತ ಹೂಡಿಕೆಗಳಿಂದ ಧನ ನಷ್ಟ ಆಗುವ ಸಂಭವ. ನಿಮ್ಮಲ್ಲಿ ಹೊಳೆಯುವ ಆಲೋಚನೆ ಉತ್ತಮ ಪರಿಕಲ್ಪನೆಯಾಗಿದ್ದು ಇದರಿಂದ ಅನುಕೂಲಗಳು ಕಾಣಸಿಗಲಿದೆ. ನೀವು ನಿಮ್ಮ ಮಕ್ಕಳ ಮೇಲೆ ಇಟ್ಟಿರುವ ಭರವಸೆ ಕಾರ್ಯರೂಪಕ್ಕೆ ಬರುವುದು. ಸಾಲದ ತೀರುವಳಿ ಮಾಡಿದಲ್ಲಿ ಅನುಕೂಲವಾಗುವುದು. ನೀವು ಪುರಸ್ಕಾರವನ್ನೂ ಪಡೆಯುತ್ತೀರಿ. ಶುಭದಿನ 22. ಶ್ರೀವೆಂಕಟೇಶ್ವರ ಸ್ತೋತ್ರ ಪಠಿಸಿರಿ

---




ಹಿರಿಯರ ಬಗ್ಗೆ ಗೌರವ ನೀಡುವುದು ಒಳ್ಳೆಯದು. ಉತ್ತಮ ಆರ್ಥಿಕ ಗಳಿಕೆ ಇದ್ದರೂ ಕೆಲವೊಂದು ವಿಷಯಗಳಲ್ಲಿ ನಿಮ್ಮ ದುಡುಕುತನ ದೊಡ್ಡಪೆಟ್ಟನ್ನು ನೀಡಬಹುದಾಗಿದೆ. ಮನಸ್ಸು ಮರ್ಕಟವಿದ್ದಂತೆ ನಿಮ್ಮ ಮನೋಕಾಮನೆಗಳಲ್ಲಿ ನಿಯಂತ್ರಣದಲ್ಲಿ ಇರಲಿ. ಸಮಾರಂಭಗಳಲ್ಲಿ ಪಾಲ್ಗೊಳ್ಳುವ ಸಾಧ್ಯತೆಗಳು ಕಂಡುಬರುತ್ತವೆ. ಉದ್ಯೋಗದಲ್ಲಿ ಬದಲಾವಣೆ ಬಡ್ತಿ ಸಂಭವ. ಶುಭದಿನ 24. ಹನುಮಾನ್ ಚಾಲಿಸ್ ಪಠಿಸಿರಿ.

---




ಕೆಲಸದಲ್ಲಿ ಹೆಚ್ಚಿನ ವಿಳಂಬದಿಂದ ನಿಮ್ಮ ಬಗ್ಗೆ ದೂರುವರು. ಅತಿಯಾದ ಆಸಕ್ತಿ ತೋರಿಸುವುದು ಒಳ್ಳೆಯದಲ್ಲ. ಟೀಕಿಸುವಂತಹ ಜನರ ಕುರಿತು ಆತಂಕ ಪಡಬೇಕಾಗಿಲ್ಲ. ನಿಮ್ಮ ಸುತ್ತಮುತ್ತಲ ಜನರೇ ನಿಮ್ಮನ್ನು ಅಡ್ಡಹಾದಿಗೆ ಎಳೆಯುತ್ತಿರುವರು. ನಿಮ್ಮ ಬಳಿ ಬರುವ ಜನರ ಬಗ್ಗೆ ಎಚ್ಚರದಿಂದಿರಿ. ವೈವಾಹಿಕ ಸಂಬಂಧ ಒದಗಿಬರುವ ಸಾಧ್ಯತೆಯಿದೆ. ಶುಭದಿನ 25. ಶ್ರೀರಾಮರಕ್ಷಾ ಸ್ತೋತ್ರ ಪಠಿಸಿರಿ.

---




ಆರ್ಥಿಕ ಬೆಳವಣಿಗೆ ಸಾಧಿಸುವಿರಿ. ರಾಜಿ ಪಂಚಾಯಿತಿಗಳಿಗೆ ಹೋಗದಿರುವುದು ಸೂಕ್ತ. ಸುಖಾಸುಮ್ಮನೆ ಕದನಕ್ಕೆ ಬರುವಂತಹ ಜನಗಳು ಕಂಡುಬರುತ್ತಾರೆ. ಸಂಗಾತಿಯ ಜೊತೆಗೆ ಖರೀದಿ ಪ್ರಕ್ರಿಯೆಗಳನ್ನು ಮಾಡಲು ಇಚ್ಛಿಸುತ್ತೀರಿ. ನಿಮ್ಮ ಹಣ ಅಧಿಕ ಪ್ರಮಾಣದಲ್ಲಿ ಖರ್ಚಾಗುವುದು. ಅತಿಯಾದ ಮಾನಸಿಕ ಸಮಸ್ಯೆಯನ್ನು ದೂರವಿಡಿ. ಶುಭದಿನ 24. ಮಹಾಗಣಪತಿಗೆ ದೂರ್ವಾರ್ಚನೆ ಮಾಡಿರಿ.

---




ನಿಮ್ಮ ಸಾಮರ್ಥ್ಯವನ್ನು ಸಂಪೂರ್ಣವಾಗಿ ಬಳಸಿಕೊಳ್ಳುತ್ತೀರಿ. ನಿಮ್ಮ ಸಾಮಾಜಿಕ ಸ್ಥಾನಮಾನದಲ್ಲಿ ಏರಿಕೆ ಆಗಲಿದೆ. ವಾರದ ಅಂತ್ಯಕ್ಕೆ ಸರಿಯುತ್ತಾ ದೈಹಿಕ ನೋವುಗಳು ಕಾಡುತ್ತವೆ. ಸಂಬಂಧಿಕರ ಜತೆ ಅನಗತ್ಯವಾದ ವಿವಾದಗಳು ಆಗಿ, ಒತ್ತಡ ಏರ್ಪಡುತ್ತದೆ. ದೈಹಿಕ ಮತ್ತು ಮಾನಸಿಕ ಸಮತೋಲನವನ್ನು ಕಾಪಾಡಿಕೊಳ್ಳಿ. ಶುಭದಿನ 23. ಚಂಡಿ ಪಾರಾಯಣ ಮಾಡಿರಿ.

---




ಹೊಸ ಯೋಜನೆಗೆ ಈ ವಾರ ಸಿದ್ಧತೆ ನಡೆಸುವುದು ಒಳ್ಳೆಯದು. ಕೃಷಿ ಚಟುವಟಿಕೆಗಳಲ್ಲಿ ಉತ್ತಮವಾದ ಬೆಳವಣಿಗೆ ಕಂಡುಬರುತ್ತದೆ. ಆರ್ಥಿಕ ಸಹಕಾರಕ್ಕಾಗಿ ಆತ್ಮೀಯರ ಬಳಿ ಕೇಳುವ ಸಾಧ್ಯತೆ ಇದೆ. ಭೂಮಿಯ ವಿಷಯದಲ್ಲಿ ಉತ್ತಮ ವ್ಯವಹಾರ ನಡೆಸುವ ಸಾಧ್ಯತೆ ಕಂಡುಬರುತ್ತದೆ. ಆಲಸ್ಯತನ ತೋರುವುದರಿಂದ ಕೆಲಸ ಕಾರ್ಯಗಳಲ್ಲಿ ಹಿನ್ನಡೆ ಅನುಭವಿಸಬೇಕಾಗುವುದು. ಶುಭದಿನ 22. ಮಾರುತಿ ಉಪಾಸನೆ ಮಾಡಿರಿ.

---




ಈ ವಾರ ಸೋಲಿನಿಂದ ಗೆಲುವಿನ ಕಡೆಗೆ ಪ್ರಯಾಣ ಬೆಳೆಸುವಿರಿ. ಸಂತೋಷದ ಸಮಾರಂಭಗಳಲ್ಲಿ ಪಾಲ್ಗೊಳ್ಳುವ ಸಾಧ್ಯತೆ. ಕುಟುಂಬದಲ್ಲಿ ಅನಿರೀಕ್ಷಿತವಾಗಿ ಸಂಕಷ್ಟ ಎದುರಾಗಬಹುದು. ಸಮಸ್ಯೆಗಳ ಸುಳಿವಿನಿಂದ ಹೊರಬರಲು ಪ್ರಯತ್ನ ಮೆಚ್ಚುವಂಥದ್ದು. ಮನೆಗೆ ನೆಂಟರಿಷ್ಟರ ಆಗಮನ ಸಾಧ್ಯತೆ. ಮನೆಯ ಹಿರಿಯರ ಒಲುಮೆ ಗಳಿಸಿಕೊಳ್ಳುವಿರಿ. ಶುಭದಿನ 24. ಗಣಪತಿ ಸುಬ್ರಹ್ಮಣ್ಯ ಜಪ ಮಾಡಿರಿ.

---




ಕೌಟುಂಬಿಕ ಸಮಸ್ಯೆ ಸರಿಹೋಗಲಿದೆ. ಉದ್ಯೋಗದ ಸ್ಥಿತಿಗತಿಗಳು ಚೇತರಿಕೆಯತ್ತ ಸಾಗುತ್ತವೆ. ನಿಮ್ಮ ಕ್ರಿಯಾಶೀಲತೆಯಿಂದ ಹೊಸತಾದ ಕಲ್ಪನೆಗಳೊಂದಿಗೆ ಸಾಗುವಿರಿ. ಉದ್ಯೋಗದಲ್ಲಿ ಪ್ರಗತಿ ಸಾಧ್ಯತೆ ಇದೆ. ಹಣಕಾಸಿನ ವ್ಯವಹಾರ ನಿಮಗೆ ಹೆಚ್ಚಿನ ಪ್ರಶಂಸೆ ತಂದುಕೊಡುವುದು, ದೊಡ್ಡ ಕಾರ್ಯಗಳನ್ನು ಲೀಲಾಜಾಲವಾಗಿ ಮಾಡಿ ಮುಗಿಸುತ್ತೀರಿ. ಶುಭದಿನ 24. ವಿಷ್ಣು ಸಹಸ್ರನಾಮ ಮಾಡಿರಿ.